

# ಜೊತೆಯಲಿ ಜೊತೆ ಜೊತೆಯಲಿ...

## ಇದು ಚಳಿ–ಫ್ಯಾಷನ್ ಯುಗಳದ ಸಮಯ

**ಸೌಂದರ್ಯವನ್ನೂ ಕಾಪಾಡಿಕೊಳ್ಳಬೇಕು, ಫ್ಯಾಷನ್ ಉಡುಗೆ ಧರಿಸಿ ಫ್ಯಾಷನಬಲ್ ಆಗಿಯೂ ಕಾಣಬೇಕು – ಚಳಿಗಾಲ ಒಡ್ಡುವ ಈ ಸವಾಲುಗಳಿಗೆ ಫ್ಯಾಷನ್‌ಲೋಕದ್ದು ಅದ್ಭುತ ಸೃಜನಶೀಲ ಸ್ಪಂದನ. ಸೌಂದರ್ಯ–ಫ್ಯಾಷನ್ ಎರಡನ್ನೂ ನಿಭಾಯಿಸುವುದು ಒಂದು ಕಲೆ. ಆ ಕಲೆಯನ್ನು ನೀವು ಬಲ್ಲಿರಾ?**

■ ಉಮಾ ಅನಂತ್



'ಮೊದಲ ಮಳೆಗೊಂದು; ಮಾಗಿದ ಚಳಿಗೊಂದು...' ಕವನ ಚಳಿಗಾಲದ ಈ ಸಂದರ್ಭದಲ್ಲಿ ಗುನುಗುನಿಸುವಂತಿದೆ. ಶರದ್–ಹೇಮಂತ ಋತುಗಳ ಸಂಗಮದ ಚಳಿಗಾಲ ಕವಿಮನಸ್ಸಿಗೂ ಪ್ರಿಯವಾದ ಕಾಲವೆಂದೇ ಹೇಳಬಹುದು. ಹಗಲೆಲ್ಲ ಬಿಸಿಲು, ಬೆಳಿಗ್ಗೆ ಹಾಗೂ ರಾತ್ರಿ ಚಳಿಯಿಂದ ಕೂಡಿದ ಈ ಕಾಲ ಪ್ರಕೃತಿಯಲ್ಲಾಗುವ ಬದಲಾವಣೆಗೂ ಪರ್ವಕಾಲ. ಈ ಸೌಮ್ಯಕಾಲದಲ್ಲಿ ಸೌಂದರ್ಯ–ಫ್ಯಾಷನ್ ಜಗತ್ತು ಚಳಿಯನ್ನು ಎದುರಿಸಲು, ಚಳಿಗಾಲದ ಸಮಸ್ಯೆಗಳಿಂದ ಪಾರಾಗಲು ಸಿದ್ಧತೆಗಳನ್ನೂ ನಡೆಸಿಕೊಂಡಿದೆ.

ಸಾಮಾನ್ಯವಾಗಿ ಶರದ್–ಹೇಮಂತ ಋತುಗಳು ಚಳಿರಾಯನ ಅಸ್ತಿತ್ವ, ಆರ್ಭಟಗಳಿಗೆ ಮೀಸಲು. ಸದ್ಯ ಜಾಗತಿಕ ಹವಾಮಾನ ಬದಲಾಗಿದೆ. ಭೂಮಿ ಬಿಸಿಯಾಗುತ್ತಿದೆ ಎಂಬ ಸುದ್ದಿ ನಿತ್ಯವೂ ಕೇಳಿಬರುತ್ತಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಚಳಿರಾಯನೂ ತನ್ನ ಪ್ರಖರತೆಯನ್ನು ಅಭಿವ್ಯಕ್ತಿಸಲು ಏಕೋ ದಾಕ್ಷಿಣ್ಯ ತೋರಿದಂತಿದೆ. ಹಿಂದೆಲ್ಲ ನವೆಂಬರ್ ಮಾಸಾಂತ್ಯ, ಡಿಸೆಂಬರ್ ಆರಂಭ ಎಂದರೆ ಅದು ಚುಮುಚುಮು ಚಳಿಯಲ್ಲಿ ಮೈಯೊಡ್ಡಿ ಕೂರುವ ಕಾಲವಾಗಿತ್ತು. ಮೈಕೊರೆವ ಚಳಿಗೆ ಬೆಚ್ಚಗೆ ಹೊದ್ದು ಮಲಗಿದರಂತೂ ಸೂರ್ಯ ಮೂಡಿ ಅದೆಷ್ಟು ಹೊತ್ತಾದರೂ ಏಳಲು ಮನಸ್ಸಾಗದೇ ಹಾಗೇ ಮೈಯೊರಗಿ ಬಿಡುವ ಭಾವ.

ಚಳಿಗಾಲ ಪ್ರೇಮಿಗಳಿಗೆ ರೊಮ್ಯಾಂಟಿಕ್ ಮೂಡ್‌ಗೆ ಒಯ್ಯುವ ಕಾಲವಾದರೂ ಸೌಂದರ್ಯಪ್ರಿಯರಿಗೆ ಇದು ನಿದ್ದೆಗೆಡಿಸುವ ಕಾಲ. ಏಕೆಂದರೆ ಚಳಿಗಾಲದಲ್ಲಿ ತ್ವಚೆಯ ಆರೈಕೆ, ಆರೋಗ್ಯ ಕಾಳಜಿ, ತೊಡುವ ಉಡುಪು ಎಲ್ಲದಕ್ಕೂ ಹೆಚ್ಚಿನ ಕಾಳಜಿ